ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ವಾಹನ ಪಾಸುಗಳನ್ನು ವಿತರಿಸುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

380(429) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಖಾಸಗಿ ವ್ಯಕ್ತಿಗಳಿಗೆ ವಾಹನ ಪಾಸು ನೀಡಲು ಶಿಫಾರಸ್ಸು ಮಾಡುವವರು ಯಾರು; ಈ ರೀತಿಯಾಗಿ ಶಿಫಾರಸ್ಸು ಮಾಡಲು ಇರಬೇಕಾದ ಅರ್ಹತೆಗಳೇನು; ಖಾಸಗಿ ವ್ಯಕ್ತಿಗಳ ವಾಹನಗಳಿಗೆ ಯಾವ ಬಣ್ಣದ ಪಾಸುಗಳನ್ನು ನೀಡಲಾಗಿದೆ;

(ಆ) ವಿಧಾನ ಮಂಡಲದ ಹಾಲಿ ಸದಸ್ಯರು ವಿಧಾನ ಸೌಧ ಪ್ರವೇಶಿಸಲು ಅನುವಾಗುವಂತೆ ವಾಹನ ಪಾಸ್ ನೀಡಲು ಶಿಫಾರಸ್ಸು ಪತ್ರ ನೀಡಿದಲ್ಲಿ, ಸದರಿ ಪತ್ರವನ್ನು ಪರಿಗಣಿಸಬಾರದು ಎಂಬುದಾಗಿ ಆದೇಶ ನೀಡುವವರು ಯಾರು; ಈ ಕುರಿತು ಸರ್ಕಾರದ ಕ್ರಮವೇನು;

(ಇ) 2020ರ ಸಾಲಿನಲ್ಲಿ 296 ಖಾಸಗಿ ವ್ಯಕ್ತಿಗಳಿಗೆ ಪಾಸ್ ನೀಡಲು ಶಿಫಾರಸ್ಸು ಮಾಡಿದವರ ಹೆಸರು ಮತ್ತು ದೂರವಾಣಿ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು; ಯಾವ ಕಾರಣಗಳಿಗೆ ಖಾಸಗಿ ವ್ಯಕ್ತಿಗಳಿಗೆ ವಾಹನ ಪಾಸುಗಳನ್ನು ನೀಡಲಾಗಿದೆ ;

(ಈ) 2020ರ ಸಾಲಿನಲ್ಲಿ 296 ಖಾಸಗಿ ವ್ಯಕ್ತಿಗಳಿಗೆ ವಿತರಿಸಿದ ಪಾಸ್‌ನಲ್ಲಿ ನಮೂದಿಸಿರುವ ಸಂಖ್ಯೆ, ವಾಹನ ಸಂಖ್ಯೆ, ಪಾಸು ಪಡೆದ ವಾಹನ ಮಾಲಿಕರ ಮೊಬೈಲ್ ಸಂಖ್ಯೆಯೊಂದಿಗೆ ಯಾವ ಕಾರಣಕ್ಕಾಗಿ ಪಾಸ್ ವಿತರಿಸಲಾಗಿದೆ ಎಂಬುದರ ಕುರಿತು ಸಂಪೂರ್ಣ ಮಾಹಿತಿ ನೀಡುವುದು ?